(ಸದನಲ್ಲಿ ನಗು)

SRI S. SURESH KUMAR : I will take it as a compliment. I will take it as certificate.

ಶ್ರೀ ಕೆ.ಹೆಚ್. ರಂಗನಾಥ್ : ಉಪಯೋಗವಿಲ್ಲ. ಈ ದೇಶದ ಪ್ರಧಾನಿಯವರು ನಗುತ್ತಾರೆ, ನಗಿಸುತ್ತಾರೆ. ನೀವು ಪಾರ್ಲಿಮೆಂಟಿಗೆ ಹೋಗಿ ಹದಿನೈದು ದಿವಸಗಳ ಕಾಲ ಅಲ್ಲಿರಿ, ಗೊತ್ತಾಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮೊದಲು ಬೆಳ್ಳಂದೂರಿಗೆ ಹೋಗೋಣ.

ಶ್ರೀ ಕೆ.ಹೆಚ್. ರಂಗನಾಥ್ : ಇದು ಬೆಳ್ಳಂದೂರಿನಿಂದಲೇ ಶುರುವಾದದ್ದು. ಈಗ ವಿಚಾರಕ್ಕೆ ಬರೋಣ. ಸುಮಾರು ಒಂದು ಸಾವಿರ ಎಂ.ಎಲ್.ಡಿ.ಯಷ್ಟು ಕಲುಷಿತ ನೀರು ಅಲ್ಲಿ ಹೋಗುತ್ತಿರುವುದರಿಂದ ದೊಡ್ಡ ಪ್ರಶ್ನೆಯಾಗಿದೆ. ಇದರ ಬಗ್ಗೆ ಜಾಗ್ರತೆಯಿಂದ ಗಮನಹರಿಸಿ ಇದು ಮುಂದುವರಿಯದ ರೀತಿಯಲ್ಲಿ ನಾವು ಕ್ರಮ ಕೈಗೊಳ್ಳಬೇಕಾಗುತ್ತದೆ. ಪರಿಸರಕ್ಕೆ ಮಾಲಿನ್ಯವುಂಟು ಮಾಡುವ ಕೈಗಾರಿಕೆಗಳೇನಿವೆ, ಬಹಳಷ್ಟು ನೋಟೀಸ್‌ಗಳನ್ನು ಜಾರಿಗೊಳಿಸಿದರೂ ಗಮನಹರಿಸದಿರುವ ಸಂಗತಿಗಳಿವೆ. ಅದರಲ್ಲೂ ಸರ್ಕಾರಿ ಸಂಸ್ಥೆಯಾದ ಬೆಂಗಳೂರು ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್‌ಗೆ ಸುಮಾರು ಹತ್ತು ಬಾರಿ ನೋಟೀಸ್‌ಗಳನ್ನು ಕೊಟ್ಟಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ನಗಬೇಕು ಎಂದು ಹೇಳಿದರಲ್ಲ, ಅದಕ್ಕೋಸ್ಕರ ಈಗ ಹೇಳುತ್ತಿದ್ದೇನೆ. ಬೆಂಗಳೂರಿನಲ್ಲಿರುವ ಬಿಡಬ್ಲ್ಯೂಎಸ್‌ಎಸ್‌ಬಿ ಸ್ಥಿತಿ ಏನಾಗಿದೆಯೆಂದರೆ, ಇದು ಬೆಂಗಳೂರು ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್ ಆಗದೇ ಬೆಂಗಳೂರು ವಾಟರ್ ಅಂಡ್ ಸಿವರೇಜ್ ಸಪ್ಲೈ ಬೋರ್ಡ್ ಆಗಿದೆ!

ಶ್ರೀ ಕೆ.ಹೆಚ್. ರಂಗನಾಥ್ : ಅದು ಖಾಯಂ ಆಗಿ ಆ ರೀತಿಯೇ ಇರಬೇಕೇ?

ಶ್ರೀ ಎಸ್. ಸುರೇಶ್ ಕುಮಾರ್ : ನೀವು ಮಾಡುತ್ತಿದ್ದೀರಿ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಸದಸ್ಯರ ಹಾಗೂ ಸದನದ ಕಳಕಳಿ ಏನಿದೆ, ಜೊತೆಗೆ ಆ ಪ್ರದೇಶದಲ್ಲಿ ವಾಸಿಸುವ ನಾಗರಿಕರ ಕಳಕಳಿ ಏನಿದೆ, ಅದನ್ನೆಲ್ಲಾ ಅರಿತುಕೊಂಡಿದ್ದು ಅದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಜಾಗ್ರತೆಯಿಂದ ಯಾವ ರೀತಿ ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಗಮನ ಸೆಳೆಯುವ ಸೂಚನೆ

ಕೊಳ್ಳೇಗಾಲ ತಾಲ್ಲೂಕು ಗುಂಡಾಲ್ ಜಲಾಶಯದ ಬಳಿ ಆನೆಗಳ ಹಾವಳಿಯಿಂದ ಭತ್ತದ ಬೆಳೆ ಹಾಗೂ ಪ್ರಾಣ ಹಾನಿಯಾಗಿರುವುದು

ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಅಧ್ಯಕ್ಷರೆ, ಕೊಳ್ಳೇಗಾಲ ತಾಲ್ಲೂಕು ಗುಂಡಾಲ್

ಜಲಾಶಯದ ಬಳಿ ಆನೆಗಳ ಹಾವಳಿಯಿಂದ ಭತ್ತದ ಬೆಳೆ ಹಾಗೂ ಪ್ರಾಣ ಹಾನಿಯಾಗಿರುವ ಬಗ್ಗೆ ನಾನು ಮಾನ್ಯ ಅರಣ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) : ಮಾನ್ಯ ಅಧ್ಯಕ್ಷರೆ, ಕೊಳ್ಳೇಗಾಲ ತಾಲ್ಲೂಕು ಗುಂಡಾಲ್ ಜಲಾಶಯದ ಹತ್ತಿರವಿರುವ ಸುಮಾರು 3000 ಎಕರೆ ತರಿ ಭೂಮಿಯಲ್ಲಿ ಬೆಳೆದ ಬತ್ತದ ಬೆಳೆಯು, ಹಿಂಡು ಹಿಂಡು ಆನೆಗಳ ಹಾವಳಿಯಿಂದ ನಾಶವಾಗಿರುವುದರ ಜೊತೆಗೆ, ಕೆಲವರು ಪ್ರಾಣ ಕಳೆದುಕೊಂಡಿರುವ ಬಗ್ಗೆ ಈ ವರ್ಷ 2000-2001ನೇ ಸಾಲಿನಲ್ಲಿ ಗುಂಡಾಲ ಜಲಾಶಯದ ಅಚ್ಚುಕಟ್ಟು ಪ್ರದೇಶದಲ್ಲಿ ಕಾಡಾನೆಗಳಿಂದ ನಷ್ಟಗೊಳಗಾದ ಫಸಲಿನ ಕುರಿತು ಕಳೆದ ಸಾಲಿನಲ್ಲಿ ಪರಿಹಾರ ಮಂಜೂರಾಗಿ ಅನುದಾನದ ಕೊರತೆಯಿಂದಾಗಿ ಪರಿಹಾರ ನೀಡದೇ ಬಾಕಿ ಇದ್ದ 13 ಪ್ರಕರಣಗಳಿಗೆ ರೂ. 9900-00 ಪರಿಹಾರ ವಿತರಿಸಲಾಗಿದೆ.

ಈ ವರ್ಷ ಬೆಳೆ ನಷ್ಟವಾಗಿರುವ ಪ್ರಕರಣಗಳನ್ನು ಪರಿಶೀಲಿಸಿ ಇಲ್ಲಿಯವರೆಗೆ 18 ಪ್ರಕರಣಗಳಲ್ಲಿ ರೂ. 13,700-00ನ್ನು ಪರಿಹಾರವಾಗಿ ಮಂಜೂರು ಮಾಡಿ ಕಛೇರಿ ಆದೇಶ ಹೊರಡಿಸಲಾಗಿದೆ. ಈ ವರ್ಷ ಗುಂಡಾಲ ಅಚ್ಚುಕಟ್ಟು ಪ್ರದೇಶದ ಪುಟ್ಟೀರಮ್ಮನ ದೊಡ್ಡಿಯ ವಾಸಿ ಶ್ರೀ ಮಾದೇಗೌಡ ಇವರು ಸಿಂಗನಲ್ಲೂರು ಗ್ರಾಮ ವ್ಯಾಪ್ತಿಯಲ್ಲಿ ಫಸಲು ಕಾಯುವಾಗ ತಾ. 20-7-2000ರಂದು ಕಾಡಾನೆಯ ದಾಳಿಗೆ ತುತ್ತಾಗಿ ಮರಣ ಹೊಂದಿದ್ದಾರೆ. ಅವರ ಕುಟುಂಬದವರಿಗೆ ತಾತ್ಕಾಲಿಕ ಪರಿಹಾರವಾಗಿ ರೂ. 5000-00 ವಿತರಿಸಲಾಗಿದೆ.

ಮೃತರ ಕುಟುಂಬಕ್ಕೆ ಇನ್ನುಳಿದ ಪರಿಹಾರ ರೂ. 95,000-00ನೀಡಲು ಮೃತರ ವಾರಸುದಾರರ ಪಟ್ಟಿ ನೀಡಲು ಕೋರಲಾಗಿದೆ. ವಾರಸುದಾರರ ಪಟ್ಟಿ ಬರುವುದು ಇನ್ನೂ ಬಾಕಿ ಇದೆ. ವಾರಸುದಾರರ ಪಟ್ಟಿ ಲಭ್ಯವಾದ ಕೂಡಲೇ ಇನ್ನುಳಿದ ಪರಿಹಾರವಾದ ರೂ. 95,000-00 ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

+ಜಿ. ರಾಜುಗೌಡ : ಮಾನ್ಯ ಅಧ್ಯಕ್ಷರೆ, ಕಾಡಾನೆಗಳ ಹಾವಳಿಯಿಂದ ಬೆಳೆ ನಾಶವಾಗಿ ಹಾಗೂ ಪ್ರಾಣ ಹಾನಿಯಾಗಿರುವುದಕ್ಕೆ ಎಷ್ಟು ಪರಿಹಾರ ಕೊಟ್ಟಿದ್ದೀರೆಂಬ ಪ್ರಶ್ನೆ ನನ್ನದಲ್ಲ. ಕಾಡಾನೆಗಳ ಹಾವಳಿ ತಪ್ಪಿಸುವ ಬಗೆ ಹೇಗೆಂಬುದು ಇಲ್ಲಿ ನನ್ನ ಪ್ರಶ್ನೆಯಾಗಿದೆ. ಕಾಡಾನೆಗಳ ಹಾವಳಿಯಿಂದ ಆ ಪ್ರದೇಶದ ರೈತರು ಬಹಳ ಕಂಗಾಲಾಗಿದ್ದು, ಬೆಳೆ ಬೆಳೆಯದೆ ತೊಂದರೆ ಅನುಭವಿಸುತ್ತಿದ್ದಾರೆ. ಆದುದರಿಂದ, ನಾನು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಕಾಡಿನ ಅಂಚಿನಲ್ಲಿ ಕಂದಕ ತೋಡಿ ಆನೆಗಳು ಕಾಡಿನಿಂದ ಹೊರಗೆ ಬಾರದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಒಂದು ವೇಳೆ ಇದಕ್ಕೆ ಸರ್ಕಾರದ ಬಳಿ ಹಣವಿಲ್ಲವೆಂದರೆ ಒಂದು ಎಕರೆಗೆ ಒದು ಸಾವಿರ ರೂಪಾಯಿಗಳಂತೆ ತೆಗೆದುಕೊಂಡರೂ ಸುಮಾರು ಹತ್ತು ಲಕ್ಷ ರೂಪಾಯಿಗಳು ಸಂಗ್ರಹವಾಗುತ್ತದಾದ್ದರಿಂದ, ಆ ಹಣದಲ್ಲಿ ಕಂದಕ ನಿರ್ಮಿಸುವ ಕೆಲಸವಾಗಬೇಕು. ಕಾಡಾನೆಗಳ ಹಾವಳಿಯಿಂದ ಈಗಾಗಲೇ ಐದು ಜನರು ತಮ್ಮ ಪ್ರಾಣ ಕಳೆದುಕೊಂಡಿರುವುದರಿಂದ ಪರಿಹಾರ ನೀಡಿರುವುದು ಮುಖ್ಯವಲ್ಲ. ಇದರ ಬಗ್ಗೆ ಸರ್ಕಾರ ಸೂಕ್ತ ಸಮಜಾಯಿಷಿ ನೀಡಬೇಕು. ಎರಡನೆಯದಾಗಿ, ನನ್ನ ಸಲಹೆ ಏನೆಂದರೆ, ಸುಮಾರು 200-300 ಎಕರೆ

ಅರಣ್ಯ ಪ್ರದೇಶವನ್ನು ಘೋಷಿತ ಪ್ರದೇಶವೆಂದು ಮಾಡಿ, ಅಲ್ಲಿಗೆ ದನಕರುಗಳು ಹೋಗದಂತೆ ಆ ಪ್ರದೇಶದಲ್ಲಿ ಯಥೇಚ್ಛವಾಗಿ ಹುಲ್ಲು ಬೆಳೆಸಲು ಕ್ರಮ ಕೈಗೊಂಡಲ್ಲಿ ಆನೆಗಳಿಗೆ ಆಹಾರವಾಗಿ ಹುಲ್ಲು ದೊರಕಿಸಿಕೊಟ್ಟಂತಾಗುತ್ತದಲ್ಲದೆ ಇದರಿಂದ ಆನೆಗಳು ಆಹಾರ ಅರಸಿ ಕಾಡಿನಿಂದ ಹೊರಗೆ ಬರಲು ಸಾಧ್ಯವಾಗುವುದಿಲ್ಲ. ಈ ರೀತಿ ಕ್ರಮ ಕೈಗೊಳ್ಳುವ ಮೂಲಕ ಕಾಡಾನೆಗಳ ಹಾವಳಿಯನ್ನು ತಡೆಗಟ್ಟಿದಂತಾಗುತ್ತದೆ. ಆದುದರಿಂದ, ರೈತರು ತಮ್ಮ ಬೆಳೆ ತೆಗೆದುಕೊಂಡ ನಂತರ ಆದಷ್ಟು ಬೇಗ ಅಲ್ಲಿ ಕಂದಕ ನಿರ್ಮಾಣ ಪ್ರಾರಂಭಿಸುವುದಕ್ಕೆ ಆದೇಶ ಕೊಡಬೇಕು. ಮತ್ತು ರೈತರು ಬೆಳೆದಿರುವ ಫಸಲು ಅವರ ಕೈಗೆ ಸಿಗುವ ತನಕ ಅರಣ್ಯ ಇಲಾಖೆಯ ಸಿಬ್ಬಂದಿ ಅಲ್ಲಿಯೇ ಬೀಡು ಬಿಡುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಇದರ ಬಗ್ಗೆ ಸದಸ್ಯರೊಂದಿಗೆ ಮಾತನಾಡಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಬೀದರ್ ಜಿಲ್ಲೆಯ ಮೂರು ಪ್ರಮುಖ ರಸ್ತೆಗಳು ಹಾಳಾಗಿರುವುದು

ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯ ಮೂರು ಪ್ರಮುಖ ರಸ್ತೆಗಳು ಹಾಳಾಗಿರುವ ಬಗ್ಗೆ ನಾನು ಮಾನ್ಯ ಲೋಕೋಪಯೋಗಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಧರ್ಮಸಿಂಗ್ (ಮಾನ್ಯ ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಕಂಡ ಹೇಳಿಕೆಯನ್ನು ಮಾಡಲಿಚ್ಚಿಸುತ್ತೇನೆ. ಬೀದರ್ ಜಿಲ್ಲೆಯ ಕೆಳಕಂಡ 3 ರಸ್ತೆಗಳ ಪೈಕಿ ಎರಡು ರಸ್ತೆಗಳು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಇನ್ನುಳಿದ ಒಂದು ರಸ್ತೆ ರಾಜ್ಯ ಹೆದ್ದಾರಿಯಾಗಿರುತ್ತದೆ. ಈ ಮೂರು ರಸ್ತೆಗಳು ಮುಖ್ಯ ರಸ್ತೆಗಳಾಗಿದ್ದು, ಮಹಾರಾಷ್ಟ್ರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುತ್ತದೆ.

1. ಎಕಂಬಾ ಗ್ರಾಮದಿಂದ ಮುರ್ಕಿ ಗ್ರಾಮದವರೆಗೆ (ಮಹಾರಾಷ್ಟ್ರ ರಾಜ್ಯದ ಗಡಿ) ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಇದರ ಉದ್ದ 17.30 ಕಿ.ಮೀ. ಇರುತ್ತದೆ. ರಸ್ತೆ ಬಹಳಷ್ಟು ಕಡೆ ಸಿಂಕ್ ಆಗಿರುವುದಲ್ಲದೆ ಗುಂಡಿಗಳು ನಿರ್ಮಾಣವಾಗಿರುತ್ತದೆ.

2. ಎಕಂಬಾ ಗ್ರಾಮದಿಂದ ಕಮಲನಗರ ಗ್ರಾಮದವರೆಗಿನ ರಸ್ತೆಯ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ರಸ್ತೆಯ ಉದ್ದ 20 ಕಿ.ಮೀ. ಇರುತ್ತದೆ. ರಾಜ್ಯ ಹೆದ್ದಾರಿ-4 ರ ಮೇಲೆ ಸಂಗಮ ಸೇತುವೆ ಮೇಲೆ ಪ್ರವಾಹದ ನೀರು ಹರಿಯುತ್ತಿರುವಾಗ, ಮಹಾರಾಷ್ಟ್ರ ರಾಜ್ಯದಿಂದ ಬರುವ ಎಲ್ಲಾ ಭಾರಿ ವಾಹನಗಳು ಈ ರಸ್ತೆಯ ಮುಖಾಂತರ ಔರಾದ ಮಾರ್ಗ ಬೀದರಕ್ಕೆ ಬಂದು ಸೇರುತ್ತದೆ. ಇದರಿಂದಾಗಿ ರಸ್ತೆಯು ಬಹಳಷ್ಟು ಹಾಳಾಗಿರುತ್ತದೆ. ರಸ್ತೆ ಬಹಳಷ್ಟು ಸಿಂಕ್ ಆಗಿ, ಡಾಂಬರ ಮೇಲ್ಪ್ಯ ಹಾಳಾಗಿ ದೊಡ್ಡ ಗುಂಡಿಗಳು ನಿರ್ಮಾಣವಾಗಿವೆ.

3. ವನಮಾರಪಲ್ಲಿ-ಶ್ರೀರಂಗಪಟ್ಟಣ (ಕಾಡಾದಿಂದ ಮನಮಾರಪಲ್ಲಿ ವರೆಗಿನ ರಸ್ತೆ) ರಾಜ್ಯ ಹೆದ್ದಾರಿಯಾಗಿದ್ದು, (ರಾಜ್ಯ ಹೆದ್ದಾರಿ -15) ಇದರ ಸರಿಯಾದ ನಾಮಾಂಕಿತ ಮನಮಾರಪಳ್ಳಿ-ರಾಯಚೂರು